ಪ್ರಮಾಣೀಕರಿಸಲಾದ ದಿನಾಂಕಃ- **11.06.2025.**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್. ವಿ. ಎಸ್. ವಕೀಲರಿಂದಃ-</u>

ಆರೋಪಿಯ ತಂದೆ ತಾಯಿ ಹೆಸರು ಗೊತ್ತಿಲ್ಲ. ಅವರ ತಂದೆ ಮನೆ ಬಿ. ಶೆಟ್ಟಿಗೇರಿಯಲ್ಲಿದೆ ಎಂದು ಹೇಳುತ್ತಿದ್ದ. ಆರೋಪಿಯ ತಾಯಿಯ ಊರು ಕುಟ್ಟಂದಿ. ಆರೋಪಿ ಪಕ್ಕದ ಊರಿನವನಾಗಿದ್ದು, ಆದರೆ ನಿಖರವಾಗಿ ಯಾವಾಗ ಪರಿಚಯವಾದ ಎಂದು ಗೊತ್ತಿಲ್ಲ. ನನ್ನ ಮಗ ಮತ್ತು ಆರೋಪಿಯ ಮಗ ಸ್ನೇಹಿತರು. ನನ್ನ ಮಗನ ಮೂಲಕ ಆರೋಪಿ ಪರಿಚಯ ಎಂದರೆ ಸರಿ, ನೇರವಾಗಿ ಪರಿಚಯವಿಲ್ಲ. ನನ್ನ ಹೆಂಡತಿ finance ಗೆ ಹಣ ಕೊಡುತ್ತಾರೆ. ಗೋಣಿಕೊಪ್ಪದಲ್ಲಿ Sathvik ಹೆಸರಿನಲ್ಲಿ finance ಕಚೇರಿ ಇದೆ. ನನ್ನ ಹೆಂಡತಿಯೇ ಇದರ ಮೇಲ್ವಿಚಾರಕರು. ಈ finance ಕಚೇರಿಯಲ್ಲಿ ನನ್ನ ಹಸ್ತಕ್ಷೇಪ ಇಲ್ಲ ಎಂದರೆ ಸರಿ. ಯಾವ ಆದಾಯ ಮೂಲದಿಂದ ಆ finance ನಡೆಸುತ್ತಿದ್ದಾರೂ ಗೊತ್ತಿಲ್ಲ. ನನ್ನ ಹೆಂಡತಿ ಆರೋಪಿಯ ಗಂಡನ ನಡುವೆ ಈ finance ಯಾವುದೇ ಲೇವಾದೇವಿ ಆಗಿಲ್ಲ.

ಆರೋಪಿ ನಿ. ಪಿ. 6 ಪ್ರತಿ ಉತ್ತರ ನೀಡಿರುವ ವಿಚಾರ ನನಗೆ ನೆನಪಿಲ್ಲ. ಆರೋಪಿಯ ಗಂಡ ಈ finance ನಿಂದ 1 ಲಕ್ಷ ಹಣ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ಸಾಲ ಕೇಳಿರುತ್ತಾನೆ, ಆದರೆ ನನ್ನ ಹೆಂಡತಿ ಕೊಟ್ಟಿರುವುದಿಲ್ಲ ಎಂದು ನನಗೆ ಗೊತ್ತಿರುತ್ತದೆ. 1 ಲಕ್ಷ ರೂ ಸಾಲ ಆರೋಪಿಗಂಡ ಪಡೆದಿರುವುದು ನನಗೆ ನನ್ನ ಮಗನಿಗೆ ಗೊತ್ತು, ಈ ವಿಚಾರ ಮೊಬೈಲ್ ನಲ್ಲಿ ಮಾತನಾಡಿದಾಗ record ಕೂಡ ಮಾಲಾಗಿದೆ ಎಂದರೆ ಸರಿಯಲ್ಲ. ಈ ಸಾಲ ಆರೋಪಿ ಗಂಡ ಮರುಪಾವತಿ ಮಾಡಿರುತ್ತಾನೆ ಎಂದರೆ ಸಾಲನೇ ಪಡೆದಿಲ್ಲ. ಆರೀತಿ ಸಾಲ ಪಡೆದಾಗ 3 ಭದ್ರತಾ ಚೆಕ್ ಗಳನ್ನು ಆರೋಪಿಯ ಗಂಡನಿಂದ finance ನಲ್ಲಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 3 ಚೆಕ್ ಗಳು ಆರೋಪಿಯದ್ದು, ಆರೋಪಿಯ ಗಂಡನದ್ದು ಮತ್ತು ಆರೋಪಿ ತಮ್ಮನದ್ದು ಎಂದರೆ ಸರಿಯಲ್ಲ. ಈ ಪ್ರಕರಣ ಇರುವುದು ನನ್ನ ಹೆಂಡತಿಗೆ ಗೊತ್ತು.

**CC. No. 1558/2024** **PW -1**

ಆರೋಪಿಯು 3 ಚೆಕ್‌ಗಳು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಪೊ. ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಹೆಂಡತಿ ಬೇರೊಬ್ಬರಿಗೆ ಸಾಲ ಕೊಡಲು ನಾನು ಹಣ ಒದಗಿಸುವುದಿಲ್ಲ. ನನ್ನ ಹೆಂಡತಿಯ ಹೆಸರು ರೂಪ. ಸಾಕ್ಷಿಗೆ ಆತನ ಹೆಂಡತಿ ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಓದಿ ಹೇಳಲಾಗಿ ಅದನ್ನು ಅಲ್ಲಗೆಳೆದಿದ್ದು ಅದರಲ್ಲಿ ಆಕೆಯ ಸಹಿಯನ್ನು ಅಲ್ಲಗೆಳೆದಿರುತ್ತಾನೆ. ನಾನು ನನ್ನ ಹೆಂಡತಿ ಜೊತೆಯಲ್ಲಿದ್ದೇವೆ. ಅದರಲ್ಲಿ ಬರೆದಿರುವ ಹಸ್ತಾಕ್ಷರ ನನ್ನ ಹೆಂಡತಿಯದ್ದಲ್ಲ. ನನ್ನ ಹೆಂಡತಿಯ ದೂರವಾಣಿ ಸಂಖ್ಯೆ ನೆನಪಿಲ್ಲ. ಮೇಲೆ ಹೇಳಿದ ಎಲ್ಲ ವಿಚಾರಗಳು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಗಂಡನನ್ನು ಇದುವರೆಗೂ ಈ ಪ್ರಕರಣದ ವಿಚಾರವಾಗಿ ಮಾತನಾಡಿಸಿರುವುದಿಲ್ಲ. Phone recordings and video recording ಆರೋಪಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಡ್ಡಿ ಇಲ್ಲ.

ಆರೋಪಿ ಗಂಡ ಸಾಲ ತಿಂಗಳ ಕಂತಿನಲ್ಲಿ ತೀರಿಸುತ್ತಿದ್ದು ಅದಕ್ಕೆ ರಶೀದಿ ನನ್ನ ಹೆಂಡತಿ ಕೊಡುತ್ತಿರುವುದಿಲ್ಲ ಎಂಬ ಬಗ್ಗೆಯೂ ನನಗೆ ಗೊತ್ತಿಲ್ಲ. ಈ ರಶೀದಿ ಕೊಡುವುದಿಲ್ಲ ಎಂದು ನನ್ನ ಹೆಂಡತಿ ಹೇಳಿದ್ದು ಅದನ್ನು ಆರೋಪಿ ಗಂಡ record ಮಾಡಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ, ಆದ್ದರಿಂದ ಯಾವುದೇ ಸಾಲ ಇರುವುದಿಲ್ಲ. ನಿ. ಪಿ. 1 ರಲ್ಲಿ ತೋರಿಸಿರುವ ಹಣ ತೀರಿಸಲು ಬಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಿ. ಪಿ. 1 ರಲ್ಲಿರುವ ಅದರಲ್ಲಿರುವ ಅಕ್ಷರದ ಬರವಣಿಗೆ ನಾನು ಬ್ಯಾಂಕ್‌ನಲ್ಲಿ ಬರೆಸಿರುತ್ತೇನೆ. ಬ್ಯಾಂಕ್‌ನವರೇ ದಿನಾಂಕವನ್ನು ಬರೆದಿರುತ್ತಾರೆ. ನಿ. ಪಿ. 1 ರಲ್ಲಿರುವ ಅಕ್ಷರಣದ ಬರವಣಿಗೆ ನನ್ನದು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ